**ಕವಿತೆ**




## ಸತ್ಯಾನಂದ ಪಾತ್ರೋಟ

ಕಲೆ: ಬಸವರಾಜ ಕಲೆಗಾರ




# ಮನುಷ್ಯರನು ಹುಡುಕುತ್ತಾ...

ಹೊಸ ವರ್ಷ ಬಂತೆಂದು
ಮನುಷ್ಯರನು
ಹುಡುಕುತ್ತಾ ಹೊರಟೆ
ಮನುಷ್ಯರೇ ಕಾಣಲಿಲ್ಲ ಎಲ್ಲೂ

ಅದೇ ಹಳೆಯ ಪಳೆಯುಳಿಕೆಗಳು
ಹಳಸಿದ ಮುಖಗಳು
ಪುಂಗಿ ಪಿಕಾಲಿಗಳು
ರಕ್ತಾಸುರರು, ಬಾಯ್ಬಡಕರು
ಇವನ ಕಾಲಲಿ ಹಣ, ಕಣ
ಅವನ ಬಗಲಲಿ ಜಾತಿ ಗಣ
ನೋಡಿದತ್ತ ಕಾಣ ಕಾಣ ಉತ್ತತ್ತಿ
ಮರ್ಯಾದೆಗೇಡಿನ ಉತ್ಪತ್ತಿ

ಎಲ್ಲೆಂದರಲ್ಲಲ್ಲಿ
ಇಲಿ, ಹೆಗ್ಗಣ, ನಾಯಿ, ನರಿಗಳದ್ದೇ ಕುಣಿತ
ಎಲ್ಲೂ ಕಾಣುತ್ತಿಲ್ಲ
ಪಕ್ಷಿಗಳ ಇಂಚರ ಜಿಂಕೆ, ಮೊಲಗಳ ನೆಗೆತ

ಬಹುತ್ವಕ್ಕೆಲ್ಲಿದೆ ಇಲ್ಲಿ ಅರ್ಥ
ಒಂದೊಂದೇ ಬಿಕ್ಕುತಲಿವೆ ವ್ಯರ್ಥ

ಬುದ್ಧ, ಬಸವ, ಗಾಂಧಿ, ಅಂಬೇಡ್ಕರಂತವರು
ತುಟಿ ಚಪಲಕ್ಕಷ್ಟೇ ಬೇಕು
ಕುರ್ಚಿ ಸಿಕ್ಕರೆ ಸಾಕು
ಕಾಡುವುದಿಲ್ಲ, ಕಾಣಿಸುವುದಿಲ್ಲ
ಅವರ ನೆರಳು, ನೆನಪು

ಹೊಸ ವರ್ಷ ಬಂತೆಂದು
ಮನುಷ್ಯರನು
ಹುಡುಕುತ್ತಾ ಹೊರಟೆ
ಮನುಷ್ಯರೇ ಕಾಣಲಿಲ್ಲ ಎಲ್ಲೂ
ಎಲ್ಲ ಕಡೆ ಥರಾವರಿಗಳದ್ದೇ ಕಾರುಬಾರು

ಅದಕ್ಕೆ ಇರಬೇಕು
ಹೊಸ ವರ್ಷ ಕ್ಯಾಲೆಂಡರಿನಲ್ಲಿಯೇ ಉಳಿಯಿತು
ಮತ್ತೊಂದು ಹೊಸ ವರ್ಷಕೆ
ಇದು ಸಾಕ್ಷಿಯಾಯಿತು

